# ಜಪಾನಿ ಕವಿ ಬಾಶೊ ಹೈಕುಗಳು



ಹತ್ತಿಯ ಗದ್ದೆ–
ಚಂದಿರನೇ
ಹೂ ಬಿಟ್ಟಂತೆ!

ಕುದುರೆ ಗೊರಸಿನ
ಸದ್ದು! ಓಹೋ!!
ನಾನೂ ಈ ಭೂದೃಶ್ಯದ ಭಾಗ!



ಬೇಸಗೆಯ ಹುಲ್ಲು.
ಉಳಿದಿರುವುದು
ಯೋಧನ ಕನಸುಗಳಷ್ಟೆ!

ಅವರು ಇಲ್ಲದಿರುವಾಗ
ದೇವರ ತೋಟದಲ್ಲಿ
ತರುಗಳೆಲ್ಲಾ ಸೇರುವವು!



ಒಣಗಿದ ಕೊಂಬೆ ಮೇಲೆ
ಬಾಗಿದೆ ಕಾಗೆ
ಚಳಿಗಾಲದ ಸಂಜೆ!

ಚಳಿಗಾಲದ ಮುಂಜಾವು
ಮಂಜಿನ ಸಮುದ್ರ
ಹೆಸರಿಲ್ಲದ ಪುಟ್ಟ ಗುಡ್ಡದ ಮೇಲೆ!





ವಸಂತ ಮುಗಿಯುತ್ತಿದೆ
ಪಕ್ಷಿಗಳ ದುಃಖ, ಮೀನುಗಳ
ಅಕ್ಷಿಯಲ್ಲಿ ಹನಿ ಹನಿ!

ಮತ್ತೆ ಭೇಟಿ ಆಗುವವೆ
ಈ ಹೂವಿನ ಗೋರಿಗಳಲ್ಲಿ
ಎರಡು ಬಿಳಿ ಚಿಟ್ಟೆಗಳೇ?



ನೋಡು ಬಾ
ಈ ನೋವಿನ ಜಗದ
ನಿಜದ ಹೂವುಗಳನ್ನ!

ಆಹಾ! ಮೌನ ಧ್ಯಾನ!
ಬಂಡೆಯೊಂದನ್ನು ಭೇದಿಸುತ್ತಿರುವ
ಜೀರುಂಡೆಯ ದನಿ!

● **ಕನ್ನಡಕ್ಕೆ: ಡಾವೆಂಕಿ**
ಕಲೆ: ವೆಂಕಟ್ರಮಣ ಭಟ್